ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4270
ಸದಸ್ಯರ ಹೆಸರು : ಶ್ರೀ ಬಸವಣ್ಣೆಪ್ಪ.ಜಿ
ಉತ್ತರಿಸಬೇಕಾದ ದಿನಾಂಕ : 04–07–2005
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

ಸಂಖ್ಯೆ	ಪ್ರಶ್ನೆ	ಉತ್ತರ
1	ಭಾರತೀಯ ಅಭಿವೃದ್ಧಿ ಕೈಗಾರಿಕಾ ನಿಗಮ ಮತ್ತು ಸಣ್ಣ ಭಾರತೀಯ ಅಭಿವೃದ್ಧಿ ಕೈಗಾರಿಕಾ ನಿಗಮ (ಐಡಿಬಿಐ ಮತ್ತು ಸಿಡ್ಬಿ) ಗಳು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಸಂಸ್ಥೆಗಳಿಗೆ ನಿಲ್ಲಿಸಿರುವುದು ನಿಜವೇ;	ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕ.ರಾ.ಹ.ಸಂ.)ಗೆ SIDBI ಯು ಪುನರ್–ಧನ ಸಹಾಯವನ್ನು ನೀಡುತ್ತಿದೆ. ಆದರೆ IDBI ಸಂಸ್ಥೆಯು ನೀಡುತ್ತಿದ್ದ ಪುನರ್‌ಧನದ ಮೇಲಿನ ಬಡ್ಡಿಯು ಶೇ. 12ರಷ್ಟು ಈ ದರವು ಹೆಚ್ಚಿನದಾಗಿರುವುದು ಕರ್ನಾಟಕ ರಾಜ್ಯ ಹಣಕಾಸುಸಂಸ್ಥೆಯು IDBIನಿಂದ ಪುನರ್‌ಧನ ಪಡೆಯುವುದನ್ನು ನಿಲ್ಲಿಸಿದೆ. ಕರ್ನಾಟಕ ರಾಜ್ಯ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮವು IDBI ಮತ್ತು SIDBI ಗಳಿಂದ ಪುನರ್‌ಧನವನ್ನು ಪಡೆಯುತ್ತಿಲ್ಲ.
2	ಹಾಗಿದ್ದಲ್ಲಿ ಯಾವ ದಿನಾಂಕದಿಂದ;	ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು IDBI ನಿಂದ ದಿನಾಂಕ: 1–6–2002ರಿಂದ ಪುನರ್‌ಧನ ಪಡೆಯುವುದನ್ನು ನಿಲ್ಲಿಸಿದೆ. ಕೆ.ಎಸ್.ಐ.ಐ.ಡಿ.ಸಿ.ಯು ದಿನಾಂಕ 22–01–2002 ರಿಂದ IDBI ಸಂಸ್ಥೆಯಿಂದ ದಿನಾಂಕ 29–03–2002 ರಿಂದ SIDBI ಸಂಸ್ಥೆಯಿಂದ ಪುನರ್ ಧನ ಪಡೆಯುತ್ತಿಲ್ಲ.

ಸಂಖ್ಯೆ	ಪ್ರಶ್ನೆ	ಉತ್ತರ
3	1990ರಿಂದ 2005 ರವರೆಗೆ ಐಡಿಬಿಐ ಮತ್ತು ಸಿಡಿಬಿ ಸಂಸ್ಥೆ ಗಳಿಂದ ಕೆ.ಎಸ್.ಎಫ್.ಸಿ/ ಕೆ.ಎಸ್ .ಐ.ಐ.ಡಿ.ಸಿ. ಸಂಸ್ಥೆಗಳಿಗೆ ಬಂದಿರುವ ಒಟ್ಟು ಪುನರ್-ಧನದ ಮೊತ್ತವೆಷ್ಟು; (ವರ್ಷಾವಾರು/ಸಂಸ್ಥೆವಾರು ವಿವರ ಗಳನ್ನು ಒದಗಿಸುವುದು:-	IDBI ಮತ್ತು SIDB ಸಂಸ್ಥೆಗಳಿಂದ ಕಳೆದ 15 ವರ್ಷಗಳಿಂದ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮತ್ತು ಕೆ. ಎಸ್.ಐ.ಐ.ಡಿ.ಸಿ.ಗೆ ದೊರೆತ ಪುನರ್ ಧನಸಹಾಯ ಈ ಕೆಳಗಿನಂತಿದೆ .

ಸಂ.	ವರ್ಷ	ಕೆ.ಎಸ್.ಎಫ್.ಸಿ.		ಕೆ.ಎಸ್.ಎಫ್.ಸಿ.	
		ಪುನರ್ ಧನದ ಮೊತ್ತ		ಪುನರ್ ಧನದ ಮೊತ್ತ	
		SIDBI	IDBI	SIDBI	IDBI
1	1989-90	0	7872.31	0	0
2	1990-91	0	10167.88	0	3494.76
3	1991-92	10947.26	2838.29	0	5544.260
4	1992-93	14249.78	2054.14	0	3199.49
5	1993-94	15299.98	1700.00	909.00	3728.40
6	1994-95	17499.96	2499.75	2085.00	6299.98
7	1995-96	25470.94	3003.94	2723.47	6296.53
8	1996-97	27227.78	5550.00	5659.66	9121.82
9	1997-98	13498.78	0.00	9424.00	6580.25
10	1998-99	18869.68	2192.60	5558.25	3718.80
11	1999-00	20219.44	2003.85	5879.72	14165.22
12	2000-01	19342.23	4908.48	2200.00	8113.74
13	2001-02	14845.52	2602.09	0	7107.70
14	2002-03	14157.54	631.04	0	0
15	2003-04	15000.00	0.00	0	0
16	2004-05	8537.02	0.00	0	0
		235165.91	**48024.37**	**34439.10**	**77371.05**

ಸಂಖ್ಯೆ	ಪ್ರಶ್ನೆ	ಉತ್ತರ
4	ಈ ರೀತಿ ಐಡಿಬಿಐ ಮತ್ತು ಸಿಡಿಬಿ ಸಂಸ್ಥೆಗಳಿಂದ ರಾಜ್ಯದ ಸಂಸ್ಥೆಗಳಾದ ಕೆ.ಎಸ್.ಎಫ್.ಸಿ/ ಕೆ.ಎಸ್.ಐ.ಡಿ.ಸಿ. ಗಳಿಗೆ ಬರುತ್ತಿದ್ದ ಪುನರ್–ಧನ ನಿಂತು ಹೋಗಿರುವುದರಿಂದ ಸರ್ಕಾರವು ಪುನಃ ಪಡೆಯುವ ಪ್ರಯತ್ನಗಳನ್ನು ಏನಾದರೂ ಮಾಡಲಾಗಿದೆಯೇ	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ SIDBIಯಿಂದ ಪುನರ್‌ಧನ ಸಹಾಯವನ್ನು ಪಡೆಯುತ್ತಿರುವುದರಿಂದ ಮತ್ತು ಹೆಚ್ಚಿನ ಬಡ್ಡಿದರದ ಕಾರಣ IDBI ನಿಂದ ಪುನರ್ ಧನ ಸಹಾಯ ಪಡೆಯುವುದನ್ನು ನಿಲ್ಲಿಸುವ ಬಗ್ಗೆ ಎಚ್ಚರಿಕೆಯ ನಿರ್ಣಯವನ್ನು ತೆಗೆದುಕೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಕೆ.ಎಸ್.ಐ.ಡಿ.ಸಿ.ಗೆ ಸಂಬಂಧಿಸಿದಂತೆ ಅದರ ಕಾರ್ಯಾಚರಣೆ ಬಗ್ಗೆ ಒಂದು ಅಧ್ಯಯನವನ್ನು ನಡೆಸಲಾಗಿದ್ದು, ಅದರ ಪ್ರಕಾರ ಸಾಲ ನೀಡುವ ಸಂಸ್ಥೆಗಳು ಅನೇಕವಿರುವ ಕಾರಣ ಇವುಗಳ ಕಾರ್ಯಾಚರಣೆಯಲ್ಲಿ ಮೇಲುವ್ಯಾಪನವಾಗುವುದರಿಂದ ಕೆ.ಎಸ್. ಐ.ಐ.ಡಿ.ಸಿ.ಯ ಸಾಲ ನೀಡುವಿಕೆಯ ಕಾರ್ಯಾಚರಣೆಯನ್ನು ಬೇರೆ ಇತರೆ ಸಂಸ್ಥೆಗಳೊಂದಿಗೆ ವಿಲೀನಗೊಳಿಸಿ ಕೆ.ಎಸ್.ಐ.ಐ.ಡಿ.ಸಿ.ಯ ಪಾತ್ರವನ್ನು ಪ್ರವರ್ತಕನಾಗಿ ಪರಿಮಿತಗೊಳಿಸುವ ಬಗ್ಗೆ ಶಿಫಾರಸ್ಸು ಮಾಡಲಾಗಿದೆ.
5.	ಹಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು?	ಉ) ಮೇಲಿನ (ಈ) ನಲ್ಲಿ ತಿಳಿಸಿದಂತೆ

ಪ್ರಶ್ನೆ ಸಂಖ್ಯೆ: 325 (4270)
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಜಿ.ಬಸವಣ್ಣೆಪ್ಪ: ಮಾನ್ಯ ಉಪಾಧ್ಯಕ್ಷರೆ, ಐಡಿಬಿಐ ಮತ್ತು ಎಸ್ಐಡಿಬಿ, ಕೆ.ಎಸ್.ಎಫ್.ಸಿ ಮತ್ತು ಕೆ.ಎಸ್.ಐ.ಡಿ.ಸಿ.ಗೆ ಶಿಡ್ಲಿಗೆ ರಿಫೈನಾನ್ಸ್ ನಿಲ್ಲಿಸಿರುವುದರಿಂದ ಲೆಂಡಿಂಗ್ ಕೆಪಾಸಿಟಿ ಅಂದರೆ ಸಾಲ ನೀಡುವ ಪ್ರಮಾಣ ಕಡಿಮೆ ಆಗಿಲ್ಲವೇ? ಹಾಗಾದರೆ ಆ ಪ್ರಮಾಣ ಎಷ್ಟು? ಕೆ.ಎಸ್.ಎಫ್.ಸಿಗೆ ಕಡಿಮೆ ಆದ ಪ್ರಮಾಣವೆಷ್ಟು? ಕೆ.ಎಸ್.ಐ.ಡಿ.ಸಿ. ಪ್ರಮಾಣ ಎಷ್ಟು? ಈ ಕೆ.ಎಸ್.ಎಫ್.ಸಿ, ಕೆ.ಎಸ್.ಐ.ಡಿ.ಸಿ. ಆರ್ಥಿಕ ಪರಿಸ್ಥಿತಿ ಬಹಳ ಹೀನಾಯ ವಾಗಿರುವುದರಿಂದ ಅವುಗಳನ್ನು ರಿವೈವ್ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಸಿದ್ಧರಾಮಯ್ಯ (ಮಾನ್ಯ ಉಪ ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಸಿಡ್ಬಿ ಇದೆಯಲ್ಲಾ ಸಿಡ್ಬಿಯದು ಕೆ.ಎಸ್.ಎಫ್.ಸಿಗೆ ರೀಫೈನಾನ್ಸ್ ಈಗಲೂ ನಡೆಯುತ್ತಲೇ ಇದೆ. ಅದನ್ನು ನಿಲ್ಲಿಸಿಲ್ಲ. ನೀವು ಎರಡನ್ನೂ ಕೇಳಿದ್ದೀರಿ. ಕೆ.ಎಸ್.ಐ.ಡಿ.ಸಿ.ಯ ವಿಚಾರವನ್ನೂ ಕೇಳಿದ್ದೀರಿ, ಕೆ.ಎಸ್.ಎಫ್.ಸಿ ವಿಚಾರವನ್ನೂ ಕೇಳಿದ್ದೀರಿ ನಾನು ಎರಡೂ ವಿಚಾರಗಳನ್ನು ಹೇಳಬೇಕಲ್ಲ. ಕೆ.ಎಸ್.ಎಫ್.ಸಿ ಸಿಡ್ಬಿ ಅದರದ್ದು ರೀಫೈನಾನ್ಸ್ ಈಗಲೂ ಮುಂದುವರಿಯು ತ್ತಿದೆ. ಅದರದ್ದು ನಿಲ್ಲಿಸಿಲ್ಲದ ಅವರೇನೂ ನಿಲ್ಲಿಸಿಲ್ಲ. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾಗೆ ಸಂಬಂಧಪಟ್ಟಂತೆ ಸಿಡ್ಜಿ ಎಂದರೆ ಸ್ಮಾಲ್ ಸ್ಕೇಲ್‌ಗೆ ಇಂಡಸ್ಟ್ರಿಯಲ್ ಬ್ಯಾಂಕ್ ಆಫ್ ಇಂಡಿಯಾ. ಅದರ ವ್ಯತ್ಯಾಸ ಅಷ್ಟೇ. ಈ ಕಡ್ ಎಸ್ ಅಂದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ. ಆ ಸಿಡ್ಡಿ ಜೊತೆಗೆ ಈಗಲೂ ನಮ್ಮ ಸಂಬಂಧ ಇದೆ. ರೀಫೈನಾನ್ಸ್ ಕೂಡ ನಡೆಯುತ್ತಿದೆ. ಐಡಿಬಿಐ ಜೊತೆಯಲ್ಲಿ ನಾವೇ ನಿಲ್ಲಿಸಿದ್ದೇವೆ. ಕೆ.ಎಸ್.ಎಫ್. ಸಿಯವರು ನಿಲ್ಲಿಸಿದ್ದೇವೆ. ಏಕೆಂದರೆ ರೇಟ್ ಆಫ್ ಇಂಟರೆಸ್ಟ್ 12 ಪರ್ಸೆಂಟ್ ಕೊಡಬೇಕಾಗಿತ್ತೋ ಅವೆಲ್ಲವನ್ನೂ ನಾವು ಚುಕ್ತಾಮಾಡಿ ಬಿಟ್ಟಿದ್ದೇವೆ. 120,121 ಕೋಟಿ ರೂಪಾಯಿ ಕೂಡ ಬೇಕಾಗಿತ್ತು. ಒನ್‌ಟೈಮ್ ಸೆಟಲ್‌ಮೆಂಟ್ ಮಾಡಿದ್ದರಿಂದ ನಮಗೆ 26 ಕೋಟಿ ರೂಪಾಯಿ ಉಳಿದುಕೊಂಡಿತ್ತು. ಅವರಿಗೆ ಕೊಡಬೇಕಾದ್ದನ್ನು ಎಲ್ಲಾ ನಮ್ಮ ಮೇಲೆ ಇದ್ದದ್ದನ್ನೆಲ್ಲಾ ನಾವು ಕೊಟ್ಟು ಬಿಟ್ಟಿದ್ದೇವೆ. ನಮಗೂ ಐಡಿಬಿಐಗೂ ಏನೂ ಸಂಬಂಧ ಇಲ್ಲ. ಆದರೆ ಇವತ್ತಿಗೂ ಸಿಡ್ಬಿ ಜೊತೆಯಲ್ಲಿ ರೀಫೈನಾನ್ಸ್ ನಡೆಯುತ್ತಿದೆ. ನಾವು ಅದನ್ನು ತೆಗೆದುಕೊಂಡು ಮಾಡುತ್ತಿದ್ದೇವೆ. ಹೋದ

ವರ್ಷ 100 ಕೋಟಿ ಕೊಟ್ಟಿದ್ದರು. ಈ ಸಾರಿಯೂ 100 ಕೋಟಿ ರೂಪಾಯಿ ಕೊಡುತ್ತಿದ್ದಾರೆ. ಅದರಿಂದ ಆ ವಿಚಾರ ಇಲ್ಲ. ಆದರೆ ಈ ಕೆ.ಎಸ್.ಐ.ಡಿ.ಸಿ. ಇದೆಯಲ್ಲಾ ಈ ಕೆ.ಎಸ್.ಐ.ಡಿ.ಸಿ.ನವರು ಅವರಿಗೆ ಎರಡಕ್ಕೂ ನಿಲ್ಲಿಸಿ ಬಿಟ್ಟಿದ್ದಾರೆ. ಕೆ.ಎಸ್.ಐ.ಡಿ.ಸಿ.ಯವರಿಗೆ ಸಿಡ್ಬಿಯವರೂ ನಿಲ್ಲಿಸಿ ಬಿಟ್ಟಿದ್ದಾರೆ. ಐಡಿಬಿಐ ನವರೂ ನಿಲ್ಲಿಸಿ ಬಿಟ್ಟಿದ್ದಾರೆ. ಕಾರಣ ಏಕೆಂದರೆ ನಿಮ್ಮದು ಅರಿಯರ್ಸ್ ಜಾಸ್ತಿಆಗಿ ಬಿಟ್ಟಿದೆ. ನಿಮ್ಮದು ಅರಿಯರ್ಸ್ ಜಾಸ್ತಿ ಆಗಿ ಬಿಟ್ಟಿದೆ, ರೀಪೇಮೆಂಟ್ ಆಗಿಲ್ಲ ಎನ್ನುವುದು ಒಂದು ಪ್ರಯತ್ನಗಳನ್ನು ಮಾಡಿದ್ದೇವೆ. ಅವರು ಒಪ್ಪಿಲ್ಲ. ಆಮೇಲೆ ಒಂದು ಸಾರಿ ರೀಫೈನಾನ್ಸ್ ಬದಲಾಗಿ ಲೈನ್ಆಫ್ ಎಂದು ಅದನ್ನು ಕೂಡ ಒಂದು ಸಾರಿ ಮಾಡಿದ್ದರು. ಈಗ ಅದೂ ನಿಂತು ಹೋಗಿದೆ. ಇದಾದ ಮೇಲೆ ಒಂದು ತಾರಾಸ ಕಮಿಟಿ ಎಂದು ಮಾಡಲಾಯಿತು. ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಕೆ.ಎಸ್.ಐ.ಡಿ.ಸಿ. ಬಗ್ಗೆ ಅವರದ್ದು ಏನು ರಿಪೋರ್ಟ್ ಎಂದರೆ ಅನೇಕ ಇಂಡಸ್ಟ್ರಿಗಳಿಗೆ ಸಾಲ ಕೊಡತಕ್ಕಂಥ ಫೈನಾನ್ಸಿಯಲ್ ಇನ್ಸ್ಟಿಟ್ಯೂಷನ್ಸ್‌ಗಳು ಬೇಕಾದಷ್ಟು ಇದ್ದಾವೆ. ಕೆ.ಎಸ್.ಐ.ಡಿ.ಸಿ. ಕೂಡ ಇದನ್ನು ಮಾಡಬೇಕಾಗಿಲ್ಲ. ಅದರಿಂದ ಅವರು ಇಂಡಸ್ಟ್ರಿಯನ್ನು ಪ್ರಮೋಟ್ ಮಾಡಲಿಕ್ಕೆ ಏನೇನು ಬೇಕೋ ಅದನ್ನೆಲ್ಲಾ ಮಾಡಲಿ. ಸಾಲ ಕೊಡಲಿಕ್ಕೆ ಬೇರೆ ಎಲ್ಲವನ್ನೂ ಮಾಡಲಿ ಎನ್ನತಕ್ಕ ವಿಚಾರ ಒಂದು ಇದೆ. ಆ ಸಾಲ ಕೊಡುವ ವಿಚಾರದಲ್ಲಿ ಬೇರೆ ಇನ್ಸ್ಟಿಟ್ಯೂಟ್ ಜೊತೆ ಮರ್ಜಿ ಮಾಡಲಿ ಎನ್ನತಕ್ಕ ಒಂದು ವರದಿಯನ್ನು ತಾರಾಸಕಮಿಟಿಯವರು ಕೊಟ್ಟಿದ್ದಾರೆ. ಆ ವರದಿಯ ಕನ್ಸಿಡರೇಷನ್‌ನಲ್ಲಿದೆ. ಅಂದರೆ ನಾವು ಏನೂ ತೀರ್ಮಾನ ಇನ್ನೂ ಮಾಡಿಲ್ಲ. ಇದು ಕೆ.ಎಸ್.ಐ.ಡಿ.ಸಿ.ಗೆ ಸಂಬಂಧ ಪಟ್ಟಂತಹದು. ಕೆ.ಎಸ್.ಎಫ್.ಸಿ ನಷ್ಟದಲ್ಲಿಲ್ಲ. ಕಳೆದ ವರ್ಷ ಸುಮಾರು ಎರಡು ಕೋಟಿಗೂ ಹೆಚ್ಚು ಲಾಭ ಮಾಡಿದ್ದೇವೆ. ಅದರಿಂದ ಕೆ.ಎಸ್.ಎಫ್.ಸಿ ನಷ್ಟಕ್ಕೆ ಹೋಗಿ ಬಿಟ್ಟಿದೆ ಎನ್ನತಕ್ಕದ್ದು ಸರಿಯಾದುದು ಅಲ್ಲ. ಕೆ.ಎಸ್.ಐ.ಸಿ. ಯನ್ನು ಕೂಡ ರಿವೈವ್ ಮಾಡಲಿಕ್ಕೆ ಕನ್ಸಿಡರೇಷನ್‌ನಲ್ಲಿದೆ, ಆ ರಿಪೋರ್ಟ್ ಇದೆ. ಆ ರಿಪೋರ್ಟ್ ಮೇಲೆ ಒಂದು ತೀರ್ಮಾನ ಮಾಡಿದ ಮೇಲೆ ಏನು ಮಾಡಬೇಕೋ ಆ ತೀರ್ಮಾನ ಮಾಡುತ್ತೇವೆ.

ಶ್ರೀ ಜಿ.ಬಸವಣ್ಣೆಪ್ಪ: ಕೇಂದ್ರ ಸರ್ಕಾರದ ಆರ್ಥಿಕ ನೀತಿಯಿಂದ, ಈ ಉದಾರೀಕರಣ ಇತ್ಯಾದಿಗಳ ಕಾರಣದಿಂದ ಈ ಕೆ.ಎಸ್.ಎಫ್.ಸಿ ಮತ್ತು ಇತ್ಯಾದಿ ಹಣಕಾಸು ಸಂಸ್ಥೆಗಳು ಫೈನಾನ್ಸಿಯಲ್ ಪೊಸಿಷನ್ಸ್‌ನಲ್ಲಿ ಬಹಳ ವೀಕ್ ಇದ್ದಾವೆ. ಆದ್ದರಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ರೀಫೈನಾನ್ಸ್ ಮಾಡುವುದಕ್ಕೆ

ಏಕೆ ಕ್ರಮ ತೆಗೆದುಕೊಳ್ಳಬಾರದು? ಈ ಸಂಸ್ಥೆಗಳನ್ನು ಬಲಪಡಿಸಲು ಒತ್ತಡ ಏಕೆ ಹೇರಬಾರದು?

ಶ್ರೀ ಸಿದ್ಧರಾಮಯ್ಯ: ಕೆ.ಎಸ್.ಎಫ್.ಸಿ ವಿಚಾರ ನಾನು ಈಗಾಗಲೇ ಹೇಳಿದೆ. ಸಿಡ್ಬಿಯವರು ನಮಗೆ ರೀಫೈನಾನ್ಸ್ ಮಾಡುತ್ತಿದ್ದಾರೆ. ನೋ ಪ್ರಾಬ್ಲಮ್. ಅದಕ್ಕಾಗಿ ನಾವು ಯಾರಿಗೂ ಒತ್ತಡ ಹಾಕಬೇಕಾದ ಅಗತ್ಯ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಂಟರೆಸ್ಟ್ ರೇಟ್ ಎಷ್ಟು ಇದೆ?

ಶ್ರೀ ಸಿದ್ಧರಾಮಯ್ಯ: 12 ಪರ್ಸೆಂಟ್ ಇದ್ದದ್ದನ್ನು 9.5 ಪರ್ಸೆಂಟ್‌ಗೆ ರೆಡ್ಯೂಸ್ ಮಾಡಿ ಕೊಟ್ಟಿದ್ದಾರೆ. ಅದರಿಂದ ಅವರು ರೀಫೈನಾನ್ಸ್ ಮಾಡುತ್ತಿದ್ದಾರೆ. ಮತ್ತೇ ನಾವೇ ಐಡಿಬಿಐ ಜೊತೆಯಲ್ಲಿ ನಿಮ್ಮ ಸಾಲ ಬೇಡ ಎಂದು ಹೇಳಿ ಬಿಟ್ಟಿದ್ದೇವೆ. ಏಕೆಂದರೆ, ರೇಟ್ ಆಫ್ ಇಂಟರೆಸ್ಟ್ ಜಾಸ್ತಿ ಇದೆ ಎಂದು ಬೇಡ ಎಂದು ಹೇಳಿದ್ದೇವೆ. ಮತ್ತೆ ಇನ್ನು ಒತ್ತಡ ಹಾಕುವುದು ನಮಗೆಲ್ಲಿ ಬಂತು? ಆ ಒತ್ತಡ ಹಾಕುವ ಪ್ರಮೇಯವೇ ಇಲ್ಲ.

That queation does not arise at all. ಕೆ.ಎಸ್.ಐ.ಡಿ.ಸಿ. ಬಗ್ಗೆ ತಾರಾಸ ರಿಪೋರ್ಟ್ ಇದೆ. Government examine ಮಾಡುತ್ತದೆ. ಅದಾದ ಮೇಲೆ we will take some decision on that.

ಉಪಾಧ್ಯಕ್ಷರು: ಮಾನ್ಯ ನಿಂಗಪ್ಪವನರೇ ಕುಳಿತುಕೊಳ್ಳಿ.

ಶ್ರೀ ಸಿದ್ಧರಾಮಯ್ಯ: ಕಳೆದ ವರ್ಷದಿಂದ 7.5 ಪರ್ಸೆಂಟ್. ನಾನು 9.5 ಪರ್ಸೆಂಟ್ ಎಂದು ಹೇಳಿ ಬಿಟ್ಟಿದ್ದೆ. ಅದು 7.5 ಪರ್ಸೆಂಟ್. ರೆಕಾರ್ಡ್ ಸರಿ ಹೋಗಲಿ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.